ಮನೆಯ ಚಿಕಣಿ ಸ್ಟೋರ್ ರೂಂ. ಆ ಮನೆಗೆ ಇಪ್ಪತ್ತು ವರ್ಷಗಳ ಹಿಂದೆ ಐನೂರು ರೂಪಾಯಿ ಬಾಡಿಗೆ. ನನ್ನ ಮಗ ಪುಟ್ಟ ಮಗುವಾಗಿದ್ದಾಗಿನ ಸವಿನೆನಪುಗಳು ಆ ಮನೆಯೊಂದಿಗಿವೆ. ಆಗ ನನ್ನವರಿಗೆ ಸಣ್ಣ ಕೆಲಸವಿತ್ತು. ನಾನು ಎಂ.ಎ., ಬಿ.ಇಡಿ. ಮುಗಿಸಿ ಕೆಲಸಕ್ಕಾಗಿ ಕಾಯುತ್ತಿದ್ದೆ. ನಮ್ಮ ಕಮ್ಮಿ ಆದಾಯಕ್ಕೆ ತಕ್ಕ ಮನೆ ಅದು. ನೀರನ್ನು ಮನೆ ಮುಂದಿನ ಆಳದ ಗುಂಡಿಯೊಳಗಿನ ನಲ್ಲಿಯಿಂದ ಸರತಿ ಸಾಲಲ್ಲಿ ಹಿಡಿದು ಹೊತ್ತು ತಂದು ತೊಟ್ಟಿಗೆ ತುಂಬಿಸಿಕೊಳ್ಳಬೇಕಿತ್ತು. ಮನೆ ತುಂಬ ಮುದ್ದು ಮಗುವಿನ ಹೆಜ್ಜೆಯ ಗೆಜ್ಜೆ, ಮನದ ತುಂಬಾ ಬಿಟ್ಟು ಬಂದ ನಮ್ಮೂರಿನ ನೆನಪು. ಆ ಸ್ಟೋರ್ ರೂಮೋ ದೇಹವನ್ನು ಅರ್ಧ ಬಗ್ಗಿಸಿಕೊಂಡು ನಡೆದುಹೋಗಿ ಇಬ್ಬರು ಕೂತುಕೊಳ್ಳುವಷ್ಟು ಪುಟ್ಟದು! ನಾನಲ್ಲಿ ಏನೂ ಸಾಮಾನುಗಳನ್ನು ಇಡದೆ ಶುಭ್ರವಾಗಿ ಗುಡಿಸಿ ಒರೆಸಿಡುತ್ತಿದ್ದೆ. ಏಕೆಂದರೆ ನನ್ನ ನೋವು, ದುಗುಡ, ಸಂತಸಗಳನ್ನೆಲ್ಲ ಹಂಚಿಕೊಳ್ಳಲು ಇದ್ದದ್ದು ಅದೊಂದೇ ಆಪ್ತ ಜಾಗ. ಮನೆ ಕೆಲಸ ಮುಗಿಸಿ ಮಗುವಿನೊಂದಿಗೆ ಅಲ್ಲಿ ಕುಳಿತು ದೀರ್ಘ ಯೋಚನೆಗಿಳಿದು ಎಷ್ಟೋ ದೂರ ಪಯಣಿಸಿ ಬರುತ್ತಿದ್ದೆ. ರಾತ್ರಿಯ ಜೋರು ಚಳಿಗೆ ಮುರುಟಿ ಕೂರುತ್ತಿದ್ದುದೂ ಅಲ್ಲೇ. ಈ ಕೋಣೆಗೆ ಹೊಂದಿಕೊಂಡಿದ್ದ ಅಡುಗೆಮನೆಯ ಮಂದ ಬೆಳಕು, ಆಪ್ತತೆ ಆಸ್ವಾದಿಸುತ್ತ ಅಲ್ಲಿ ಕುಳಿತುಕೊಳ್ಳುವುದು ಸ್ವರ್ಗವೇ ಆಗಿತ್ತು! ಆ ಪುಟಾಣಿ ಮನೆ, ನಿಗೂಢ ಬೀದಿ ಎಲ್ಲವೂ ನೆನಪಿನ ಕೋಶಗಳಲ್ಲಿ ಅಜರಾಮರ. ಕರಾವಳಿಯ ನಮ್ಮೂರಿಗಿಂತ ತೀರಾ ಭಿನ್ನವಾದ ಆ ಊರು, ಕೆಳಮಧ್ಯಮ ವರ್ಗದವರ ಸಾಲು ಸಾಲು ಮನೆಗಳ ಆ ಬೀದಿ ಎಲ್ಲವೂ ಜೀವನಪ್ರೀತಿಯ ದ್ಯೋತಕವಾಗಿ ಜ್ಞಾಪಕಕ್ಕೆ ಬರುತ್ತಿರುತ್ತವೆ.

ಮುಂದೆ ನಾವು ಹೊಳೆನರಸೀಪುರದಲ್ಲಿ ಒಂದು ದೊಡ್ಡ ಮನೆಯಲ್ಲಿದ್ದಾಗ ಅಲ್ಲಿದ್ದ ಸಣ್ಣ ಕೋಣೆಯೊಂದನ್ನು ತುಂಬಾ ಹಚ್ಚಿಕೊಂಡಿದ್ದೆ. ಆ ಚಳಿಯೂರಂತೂ ನನ್ನ ಜೀವಕ್ಕೆ ಹಿತವುಣಿಸಿತ್ತು. ಉಳಿದೆಲ್ಲ ಕಿರಿಕಿರಿಗಳನ್ನು ಮೀರಿಯೂ ಅಲ್ಲಿನ ಚಳಿ ನನ್ನ ಸಂಗತಿಯಾಗಿತ್ತು. ಕೊರೆಯುವ ಚಳಿಯ ರಾತ್ರಿಗಳಲ್ಲಿ ಆ ಕೋಣೆಯ ಪುಟ್ಟ ಕಿಟಕಿಯಿಂದ ಬೀದಿಗಳನ್ನು ಕಣ್ತುಂಬಿಕೊಳ್ಳುತ್ತಿದ್ದೆ. ಹಾಗೇ ಅಲ್ಲೇ ಕುಳಿತು ಅನೇಕ ಕವಿತೆಗಳನ್ನು, ಕತೆಯನ್ನು ಬರೆದಿದ್ದೆ. ಆ ಮನೆಯನ್ನು ಬಿಟ್ಟು ಬರುವಾಗ ಆದ ನೋವು ಆತ್ಮೀಯರ ಅಗಲಿಕೆಗಿಂತ ಹೆಚ್ಚು!

ಈಗ, ನಮ್ಮ ಹೊಸ ಮನೆಯ ಸ್ಟೋರ್ ರೂಮಿಗೆ ಬರುತ್ತೇನೆ. ವರ್ಷದ ಹಿಂದೆ ಸರಳವಾದ ಮನೆಯನ್ನು ಕಟ್ಟಿಸಿದೆವು. ಅದೆಷ್ಟೋ ಬಾಡಿಗೆ ಮನೆಗಳಿಂದ ಮನೆಗಳಿಗೆ ಸಾಮಾನು ಸರಂಜಾಮು ಶಿಫ್ಟ್ ಮಾಡಿ ಮಾಡಿ ರೋಸಿಹೋಗಿದ್ದ ನಮಗೆ ಕೊನೆಗೂ ನಮ್ಮದೇ ಆದ 'ನೆಲಸಂಪಿಗೆ' ಹೆಸರಿನ ನೆಲೆ ಸಿಕ್ಕಿತು! ಮನೆಯಲ್ಲಿ ಏನೇನಿರಬೇಕು ಎಂದು ನಮ್ಮ ಮಿತ ಬಜೆಟ್ ಮುಂದಿಟ್ಟುಕೊಂಡು ಚರ್ಚಿಸುವಾಗೆಲ್ಲ ನನ್ನ ಮೊದಲ ಬೇಡಿಕೆ ಇದ್ದದ್ದೇ ಸ್ಟೋರ್ ರೂಂ! ಪದೇ ಪದೇ ಅದನ್ನೇ ಹೇಳುತ್ತಿದ್ದಾಗ ನನ್ನ ಗಂಡ 'ಅಯ್ಯೋ, ಅದೊಂದು



ದೊಡ್ಡ ವಿಷಯವಲ್ಲ ಮಾರಾಯ್ತಿ; ಉಳಿದದ್ದು ಹೇಳು' ಎಂದಿದ್ದರು. ಅಚಾನಕ್ ಬಂದ ಕೊರೊನಾದಿಂದಾಗಿ ಮನೆಯ ಕೆಲಸ ನಿಂತು ಹೋಗಿ ತಲೆಬಿಸಿಯಾದರೂ ಶುರು ಮಾಡಿದ ಒಂದೂವರೆ ವರ್ಷದೊಳಗೆ ಮನೆಯೊಕ್ಕಲು ಆಯ್ತು. ಈಗ ನಮ್ಮ 'ನೆಲಸಂಪಿಗೆ'ಯ ಸ್ಟೋರ್ ರೂಂ ನನ್ನನ್ನು ನಿರಾಳಗೊಳಿಸುವ ತಾಣ. ಈ ಚಳಿಯ ರಾತ್ರಿಯಲ್ಲಂತೂ ಸ್ಟೋರ್ ರೂಮಿನಲ್ಲಿ ಕುಳಿತರೆ ಬೆಚ್ಚನೆಯ ಭಾವ. ನಮ್ಮ ಬೆಕ್ಕು ಕೆಂಚನಿಗಂತೂ ಈ ಕೋಣೆ ದೇವರಮನೆಗಿಂತ ಹೆಚ್ಚು! ಯಾಕೆಂದರೆ ಅವನ 'ದೇವರಾ'ದ ಕ್ಯಾಟ್‌ಫುಡ್ ಇರುವುದು ಈ ಸ್ಟೋರ್ ರೂಮಿನ ಕಪಾಟಿನಲ್ಲೇ! ಬೆಳಿಗ್ಗೆ ಎದ್ದಲ್ಲಿಂದ ಹಿಡಿದು ರಾತ್ರಿ ಮಲಗುವವರೆಗೂ ಆಗಾಗ ಈ ಸ್ಟೋರ್ ರೂಮಿನೆದುರು ಕುಳಿತು ಧ್ಯಾನಸ್ಥನಾಗುವುದು ಅವನ ರೂಢಿ! ಇದಲ್ಲದೆ ಒಮ್ಮೊಮ್ಮೆ ಸುಮ್ಮನೆ ಹೋಗಿ ಜಿರಳೆ ಇದೆಯೋ ಏನೋ ಎಂದು ಹುಡುಕುತ್ತಾ ಅಲ್ಲಿ ಕುಳಿತಿರುತ್ತಾನೆ. ಬೆಕ್ಕುಗಳಿಗೆ ಮೂಲೆಗಳಲ್ಲಿ ಕೂರುವುದು ಇಷ್ಟ. ಅಡುಗೆ ಕಟ್ಟೆಯ ಕೆಳಭಾಗದ ಕಪಾಟುಗಳಲ್ಲಿಯೂ ಹೀಗೇ ಹೋಗಿ ಕೂರುತ್ತಾನೆ. ಯಾರಾದರೂ ಚಿಂತೆಯಿಂದ ದಿನಗಟ್ಟಲೆ ಒಬ್ಬರೇ ಕುಳಿತರೆ ಅಥವಾ ಕೆಲಸ ಮಾಡಲಾಗದೆ ಹೋದರೆ 'ಅವನು/ಳು ಮುಲ್ಲೆ ಹಿಡಿದು ಸುಮಾರು ಸಮಯವಾಯ್ತು' ಎನ್ನುವುದು ನಮ್ಮೂರಿನ ರೂಢಿ. ಆದರೆ ನನ್ನ ಅರ್ಥದಲ್ಲಿ 'ಮುಲ್ಲೆ ಹಿಡಿಯುವುದು' ಎಂದರೆ ನಿರಾಳವಾಗುವುದು, ಸಮಾಧಾನ ಹೊಂದುವುದು! ದಿನದ ಕೆಲಸಗಳೆಲ್ಲ ಮುಗಿದು, ಮಲಗುವ ಮೊದಲು ತುಸು ಹೊತ್ತು ಸ್ಟೋರ್ ರೂಮಿನ ಕುರ್ಚಿಯಲ್ಲಿ ಆರಾಮಾಗಿ ಕೂರುವುದು ನನ್ನ ದಿನಚರಿ.

ನನ್ನ ಮಗ ಚಿಕ್ಕಂದಿನಿಂದ ಸುಮಾರು ದೊಡ್ಡವಾಗುವವರೆಗೂ ಗೂಡು ಮಾಡುವುದು ಎಂಬ ಹೆಸರಿನೊಂದಿಗೆ ಗೋಡೆಯ ಮೂಲೆಯಲ್ಲಿ ಕೊಡೆಯಿಟ್ಟು ಬೆಡ್‌ಶೀಟುಗಳಿಂದ 'ಗೂಡು' ಮಾಡುತ್ತಿದ್ದ. ಅದರೊಳಗೆ ಕುಳಿತುಕೊಳ್ಳುವುದು ಅವನ ಇಷ್ಟದ ಆಟವಾಗಿತ್ತು! ಅಡುಗೆಮನೆಯಿಂದ ನೇರ ಪ್ರವೇಶಿಸಬಹುದಾದ ನಮ್ಮ ಸ್ಟೋರ್ ರೂಮಿನ ವಿಶೇಷ ಎಂದರೆ ಅದರ ಮೇಲ್ಗಡೆ ಒಂದು ಸಣ್ಣ ಅಟ್ಟವೂ ಇರುವುದು. ಇದು ಬಯಸದೇ ಬಂದ ಭಾಗ್ಯ! ಅಂದರೆ ಅಟ್ಟದ ಕುರಿತು ನಾವೇನೂ ಹೇಳಿರಲಿಲ್ಲ. ಮನೆ ಕಟ್ಟುವವವರೇ ಮಾಡಿಕೊಟ್ಟದ್ದು. ಆದರೆ ಅಲ್ಲಿಗೆ ಹತ್ತಿ ಹೋಗಲು ಇನ್ನೂ ಏಣಿ ತಂದಿಲ್ಲ. ದಿನವೂ ಅಟ್ಟವನ್ನು ನೋಡಿ ನೋಡಿ ಖುಷಿಪಡುವುದಷ್ಟೇ ಈಗ ನನ್ನ ಪಾಲಿನ ಕೆಲಸ! ಬಾಲ್ಯದ ನಮ್ಮ ಮನೆಯ ಉಪ್ಪರಿಗೆಯ ಅಟ್ಟಗಳಲ್ಲಿ ಆಗಾಗ ಹಾವಿನಪೊರೆ ನೇತಾಡುತ್ತಿತ್ತು! ಆಗ ಹೆದರಿಕೆಯಾಗಿ ಅಜ್ಜಿಯ ಹತ್ತಿರ ಹೇಳಿದರೆ ಅದು ಕೇರೆಹಾವಿನ ಪೊರೆ, ಏನೂ ಆಗುವುದಿಲ್ಲವೆಂದು ಸಮಾಧಾನ ಹೇಳುತ್ತಿದ್ದರು. ನಾವೂ ಬೇರೆ ವಿಧಿಯಿಲ್ಲದೆ ಆ ಹಾವಿನ ಪೊರೆಯನ್ನೇ ದಿಟ್ಟಿಸುತ್ತ ಉಪ್ಪರಿಗೆಯಲ್ಲಿ ಮಲಗುತ್ತಿದ್ದೆವು. ಆದರೆ ಅಟ್ಟಕ್ಕೆ ಇಲಿಗಳನ್ನು ಹಿಡಿಯಲು ನಾಗರಹಾವು ಬಂದು ಹೋಗುತ್ತಿತ್ತು ಎಂಬುದು ಸುಳ್ಳೇನೂ ಅಲ್ಲ! ಬಹುಶಃ 'ದೇವರ ಹಾವು' ನಮಗೇನೂ ಮಾಡಲಾರದೆಂಬ ನಂಬಿಕೆ ಇತ್ತೋ ಏನೋ! ಈಗ ನೆನೆದರೆ ಮೈ ಜುಂ ಎನ್ನುತ್ತದೆ. ಬದುಕಿನ ಭದ್ರತೆ ಹೆಚ್ಚಾದ ಈ ದಿನಗಳಲ್ಲಿ ಭಯವೂ ಜಾಸ್ತಿಯಾಗಿದೆ ಅನಿಸುತ್ತಿದೆ.

'ಅಟ್ಟ ಎಂದರೆ ಇಷ್ಟ. ಏಣಿ ಎಂದರೆ ಕಷ್ಟ' ಇದು ನನ್ನ ಅನುಭವ. ಬಾಲ್ಯದ ದಿನಗಳಿಂದಲೂ ಒಂದಲ್ಲ ಒಂದು ಏಣಿ ಕನಸಿನಲ್ಲಿ ಬಂದು ನನ್ನನ್ನು ಹೆದರಿಸುತ್ತಲೇ ಇದೆ. ಏಣಿಯಿಂದ ಇಳಿಯಲು ಹೋಗುವುದು; ಕಾಲಿಟ್ಟರೆ ನೆಲೆಯೇ ಸಿಗದೆ ಅಥವಾ ಪಾದ ಜಾರಿ ಪಾತಾಳಕ್ಕೆ ಬಿದ್ದೇ ಹೋಗುವುದು, ಇಲ್ಲವೇ ಏಣಿ ಹತ್ತುವಾಗ ಮಧ್ಯೆ ಮೆಟ್ಟಿಲುಗಳು ಮಾಯವಾಗಿ ಅಂತರಿಕ್ಷದಲ್ಲಿ ನೇತಾಡುವುದು... ಇಂತಹ ನೂರಾರು ಕನಸುಗಳು ಬಿದ್ದಿವೆ. ಆದರೆ ಅಟ್ಟದ ಬೆಚ್ಚನೆಯ ನೆನಪು ಎದೆಯೊಳಗಿನ ಹೆದರಿಕೆಯನ್ನು ಚದುರಿಸುತ್ತದೆ. ಅಟ್ಟದಲ್ಲಿ ಬಚ್ಚಿಟ್ಟುಕೊಳ್ಳುವುದು ಎಷ್ಟು ಖುಷಿ! ಬಾಲ್ಯಕ್ಕೆ ನೆಗೆಯಬೇಕಾದರೆ ಅಟ್ಟ ಹತ್ತಿ ಹೋಗಿ ಅಲ್ಲಿ ಒಂದಷ್ಟು ಸಮಯ ಕಾಲ ಕಳೆಯಬೇಕು! ಅಲ್ಲಿನ ಸೊಗಡು, ಕಮಟು ವಾಸನೆ, ಧೂಳಿನ ಘಮ, ಮಳೆಗಾಲದ ಬೂಸ್ಟಿನ ವಿಶಿಷ್ಟ ಪರಿಮಳ, ಜಿರಳೆಜೇಡಗಳ ಸಂಗಾತ ಅನುಭವಿಸಿದರೆ ಮನಸ್ಸು ಮಗುವಾಗುವುದು. ಮಕ್ಕಳಿಗಾಗಿ ಕಾದಂಬರಿ ಬರೆದಾಗ ಇಂತಹ ಅಟ್ಟವೊಂದನ್ನು ಮಕ್ಕಳ ಸಡಗರದ ಭಾಗವಾಗಿ ತಂದಿದ್ದೆ. ಅದು ನನಗೆ ಖುಷಿಕೊಟ್ಟ ಬರವಣಿಗೆ. ಅಟ್ಟ, ಸ್ಟೋರ್ ರೂಂ, ಚಳಿ, ಕತ್ತಲು ಇವೆಲ್ಲ ಒಂದಕ್ಕೊಂದು ಸಂಬಂಧಿಸಿವೆ ಮತ್ತು ಇವೆಲ್ಲವೂ ನನ್ನ ಮೈಗ್ರೇನಿಗೆ ತಳುಕು ಹಾಕಿಕೊಂಡಿವೆ! ತೀವ್ರ ಮೈಗ್ರೇನ್ ಇರುವವರಿಗೆ ಬಿಸಿಲು, ಬೆಳಕು ಆಗುವುದಿಲ್ಲ. ಅಂತವರ ಜೀವ ಸದಾ ತಂಪು, ಕತ್ತಲೆ, ಚಳಿಯನ್ನು ಬಯಸುತ್ತಿರುತ್ತದೆ. ಈ ಕಾರಣಕ್ಕಾಗಿಯೇ ನನಗೆ ಅಟ್ಟ, ಸ್ಟೋರ್ ರೂಂ, ಮೂಲೆ ಮೂಲೆಗಳು ಮುಂತಾದುವೆಲ್ಲ ಇಷ್ಟ ಎಂಬ ನಂಬಿಕೆ ನನಗಿದೆ. ಆದರೂ ಇದೊಂದೇ ಕಾರಣವಲ್ಲ ಎಂಬ ಸಂಶಯವೂ ನಡುವೆ ಬಂದುಹೋಗುತ್ತದೆ! 'ಪ್ರೀತಿಸಲು ಕಾರಣ ಬೇಕಿಲ್ಲ(?)' ಎಂದುಕೊಂಡು ಸ್ವಸ್ಥವಾಗಿರುವುದೇ ಉತ್ತಮ ಆಯ್ಕೆ ಅನಿಸುತ್ತಿದೆ.

ಪ್ರತಿಕ್ರಿಯಿಸಿ: **feedback@sudha.co.in**